ಕೇಂದ್ರ ಸರ್ಕಾರದ ವಸತಿ ನಿರ್ಮಾಣಕ್ಕೆ ಅನುದಾನ

417 (441) ಶ್ರೀ ಅಂಗಾರ ಎಸ್. (ಸೂಳ್ಯ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರ ವಸತಿ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರಕ್ಕೆ ಯಾವ ಯಾವ ಯೋಜನೆ ಯಡಿಯಲ್ಲಿ ಎಷ್ಟು ಅನುದಾನವನ್ನು ಒದಗಿಸಿದೆ; ಎಷ್ಟು ಖರ್ಚು ಮಾಡಿದೆ; ಖರ್ಚು ಮಾಡದೇ ಉಳಿದಿರುವ ಹಣ ಎಷ್ಟು ; (ವಿವರಗಳನ್ನು ವರ್ಷಾವಾರು ನೀಡುವುದು)

2. ಸದರಿ ಯೋಜನೆಯಗಳನ್ನು ರಾಜ್ಯದಲ್ಲಿ ಕಾರ್ಯರೂಪಕ್ಕೆ ತರಲು ರಾಜ್ಯ ಸರ್ಕಾರ ಎಷ್ಟು ಹಣವನ್ನು ಒದಗಿಸಬೇಕಿತ್ತು; ಎಷ್ಟು ಒದಗಿಸಿದೆ, (ವಿವರ ನೀಡುವುದು)?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

1. ಕೇಂದ್ರ ಪುರಸ್ಕೃತ ಕ್ರೆಡಿಟ್ ಕಮ್ ಸಬ್ಸೀಡಿ ಯೋಜನೆಯಡಿ ಕೇಂದ್ರ ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ 1999-2000 ರಲ್ಲಿ 194.50, 2000-2001 ರಲ್ಲಿ ರೂ.8.91 ಲಕ್ಷ ಮತ್ತು 2001-02 ರಲ್ಲಿ ರೂ.141.26 ಲಕ್ಷ ಒಟ್ಟು ರೂ.344.67 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಈ ಎಲ್ಲಾ ಮೊತ್ತವು ವೆಚ್ಚವಾಗಿದೆ.

2001-02 ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿ (ಶೇ.50 ಕೇಂದ್ರದ ಪಾಲು) ರೂ.9.15 ಕೋಟಿಗಳನ್ನು ಸಹಾಯಧನವಾಗಿ ಬಿಡುಗಡೆ ಮಾಡಿದೆ. ಇದರಲ್ಲಿ ಈವರೆಗೆ ರೂ.3.29 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. 2002-03 ರಲ್ಲಿ ರೂ.5.31 ಕೋಟಿ ಕೇಂದ್ರ ಸರ್ಕಾರದಿಂದ ಸಹಾಯಧನ ಬಿಡುಗಡೆ ಮಾಡಿದೆ. ರೂ.11.19 ಕೋಟಿಗಳಷ್ಟು ಮೊತ್ತವು ಉಳಿದಿದೆ.

2. ಕ್ರೆಡಿಟ್ ಕಮ್ ಸಿಬೀಡಿ ಯೋಜನೆಯಡಿ ರಾಜ್ಯ ಸರ್ಕಾರವು ರೂ.361.145 ಲಕ್ಷಗಳನ್ನು ಒದಗಿಸಬೇಕಾಗಿದ್ದು, ಇದರಲ್ಲಿ ರೂ.114.86 ಗಳನ್ನು ಬಿಡುಗಡೆ ಮಾಡಿದೆ.

ವಾಲ್ಮೀಕಿ ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ 10,312 ಮನೆಗಳನ್ನು ನಿರ್ಮಿಸಲು 57.65 ಕೋಟಿ ರೂ.ಗಳು ಮಂಜೂರಾಗಿದ್ದು, ಇದರಲ್ಲಿ 28.82 ಕೋಟಿ ರೂ.ಗಳು (ಶೇಕಡ.50) ರಾಜ್ಯ ಸರ್ಕಾರ ತನ್ನ ಪಾಲಾಗಿ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಪೈಕಿ ರಾಜ್ಯ ಸರ್ಕಾರವು ನೀಡಿದ ಖಾತರಿ ಅನ್ವಯ ಹುಡ್ಕೋ ಸಂಸ್ಥೆಯು 14.46 ಕೋಟಿ ರೂ.ಗಳನ್ನು ಸಾಲವಾಗಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಮಂಜೂರು ಮಾಡಿ ಬಿಡಗಡೆ ಮಾಡಿದೆ.

ಸೂಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ (ಪೆರುವಾಜೆ) ಕಾಲೇಜಿನ ಕಟ್ಟಡ ಕಾಮಗಾರಿ

418 (444) ಶ್ರೀ ಅಂಗಾರ.ಎಸ್. (ಸುಳ್ಯ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸೂಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ (ಪೆರುವಾಜೆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಯಾವಾಗ ಮಂಜೂರು ಮಾಡಲಾಯಿತು; ಈ ಕಾಲೇಜು ಕಟ್ಟಡದ ಅಂದಾಜು ವೆಚ್ಚ ಎಷ್ಟು? ಈಗಾಗಲೇ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

2. ಸದರಿ ಕಾಲೇಜಿನ ಕಟ್ಟಡ ಕಾಮಗಾರಿಯನ್ನು: ಯಾವಾಗ ಪೂರ್ಣಗೊಳಿಸಲಾಗುವುದು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

1. 1991-92ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ. ರೂ.6.6 ಲಕ್ಷದ ಅಂದಾಜು ವೆಚ್ಚದ ಕಾಲೇಜಿನ ಮೊದಲನೇ ಹಂತದ ಕಟ್ಟಡ ರೂ.7.6 ಲಕ್ಷಗಳ ವೆಚ್ಚದಲ್ಲಿ ಮುಕ್ತಾಯವಾಗಿರುತ್ತದೆ.

2. ಉದ್ಭವಿಸುವುದಿಲ್ಲ.

ಡಾ।। ಶಿವರಾಮ ಕಾರಂತ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ (ಪೆರುವಾಜೆ) ಸುಳ್ಯ ತಾಲ್ಲೂಕಿನ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ

419 (446) ಶ್ರೀ ಅಂಗಾರ ಎಸ್. (ಸೂಳ್ಯ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಡಾ: ಶಿವರಾಮ ಕಾರಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ (ಪೆರುವಾಜೆ) ಸುಳ್ಯ ತಾಲ್ಲೂಕು ಇಲ್ಲಿ ಎಷ್ಟು ಜನ ಉಪನ್ಯಾಸಕ ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿದೆ; ಈಗ ಸೇವೆಯಲ್ಲಿರುವ ಉಪನ್ಯಾಸಕರ ಹುದ್ದೆಗಳು ಎಷ್ಟು;

2. ಉಪನ್ಯಾಸಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ।। ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

1. 11

06

2. ಹೌದು.

ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ರಾಜ್ಯ ಸರ್ಕಾರ ಅರೆ ಕಾಲಿಕ ಉಪನ್ಯಾಸಕರನ್ನು ಖಾಯಂ ಗೊಳಿಸುವುದು

420 (360) ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯ ಸರ್ಕಾರ 1993, 1994-95 ಹಾಗೂ ಇದಕ್ಕೂ ನಂತರದ ಹೆಚ್ಚಿನ ವರ್ಷಗಳ ಕಾಲ ಅರೆಕಾಲಿಕವಾಗಿ ಉಪನ್ಯಾಸಕರ ಸೇವೆಯನ್ನು ಪಡೆದಿದ್ದು ನಿಜವೇ;

2. ಯಾವ ಅರ್ಹತೆಯ ಆಧಾರದ ಮೇಲೆ ಆಗ ನೇಮಕ ಮಾಡಿಕೊಳ್ಳಲಾಗಿತು; ಮತ್ತು ಯುಜಿಸಿ ನೇಮಕ ನಿಯಮವು ಜಾರಿಗೆ ಬಂದಿದ್ದು ಯಾವಾಗ;